**2**

1857ರ ಸಿಪಾಯಿ ದಂಗೆಯ ಮುನ್ನವೇ, ಸ್ವಾತಂತ್ರ್ಯ ಚಳವಳಿಗೆ ಖಚಿತ ನಾಯಕತ್ವ ದೊರಕುವ ಮೊದಲೇ ಸ್ವಾತಂತ್ರ್ಯದ ಹಂಬಲದ ಹಲ ಬಗೆಯ ಚಳವಳಿಗಳು ಭಾರತದಲ್ಲಿ ಸ್ಫೋಟಗೊಂಡಿದ್ದವು. ಸಣ್ಣ ಪುಟ್ಟ ರಾಜರುಗಳು, ಪಾಳೆಯಗಾರರು ಕೂಡ ಬಂಡೆದ್ದಿದ್ದರು. ಕನ್ನಡನಾಡಿನ ಚಿತ್ರದುರ್ಗದ ಸುತ್ತಲಲ್ಲೇ ಬ್ರಿಟಿಷರ ವಿರುದ್ಧ ಬೇಡರ ದಂಗೆ ನಡೆದ ಚರಿತ್ರೆಯನ್ನು ಬಿ.ಎಲ್. ವೇಣು ಅವರ 'ದುರ್ಗದ ಬೇಡರ್ದಂಗೆ' ಕಾದಂಬರಿ ಮನೋಜ್ಞವಾಗಿ ಹಿಡಿದಿಟ್ಟಿದೆ. ಹಲವೆಡೆ ರೈತಾಪಿ, ಆದಿವಾಸಿ ಚಳವಳಿಗಳು ಗರಿಗಟ್ಟಿಕೊಳ್ಳುತ್ತಿದ್ದವು. ಬ್ರಿಟಿಷ್ ಆಡಳಿತದ ತೆರಿಗೆಯ ಹೊರೆ ನೇರವಾಗಿ ರೈತರ ಮೇಲೆ ಬಿದ್ದಿತ್ತು. ತೆರಿಗೆ ವಸೂಲಾತಿ ಮಾಡುತ್ತಿದ್ದ ದೇಶಿ ಅಧಿಕಾರಿಗಳ ಕಿರುಕುಳ ಭೀಕರವಾಗಿತ್ತು. ತಮ್ಮ ಮೂಲ ನೆಲದ ಹಕ್ಕನ್ನೇ ಕಳೆದುಕೊಂಡಿದ್ದ ಆದಿವಾಸಿಗಳು ಬಂಡೆದ್ದಿದ್ದರು. ಬಂಗಾಳದಲ್ಲಿ ಕ್ರಾಂತಿಕಾರಿ ಹಿಂದೂ ರಾಷ್ಟ್ರೀಯವಾದಿಗಳು ಭೂಗತ ಹೋರಾಟ ಶುರು ಮಾಡಿದ್ದರು. ಗಧಾರ್ ಚಳವಳಿಗಾರರು ಹಾಗೂ ಇನ್ನಿತರ ಭೂಗತ ಹೋರಾಟಗಾರರು ಬಂದೂಕು ಕೈಗೆತ್ತಿಕೊಂಡಿದ್ದರು. ಹೋಂ ರೂಲ್ ಚಳವಳಿ, ಅಕಾಲಿ ಚಳವಳಿ, ದೇವಾಲಯ ಸುಧಾರಣಾ ಚಳವಳಿಗಳು, ಕಾರ್ಮಿಕ ಚಳವಳಿ, ರೈತ ಚಳವಳಿ, ಪ್ರಾಂತೀಯ ಚಳವಳಿಗಳು, ಇಂಡಿಯನ್ ನ್ಯಾಷನಲ್ ಆರ್ಮಿ ಹೀಗೆ ಒಂದಲ್ಲ, ಹಲಬಗೆಯ ಚಳವಳಿಗಳು ದೇಶದುದ್ದಕ್ಕೂ ಚಾಲ್ತಿಯಲ್ಲಿದ್ದವು. ಇಂಥ ಹಲ ಬಗೆಯ ಚಳವಳಿಗಳ ಭಾಷೆಯೇ ಅರ್ಥವಾಗದೆ ಕಂಗೆಟ್ಟ ಬ್ರಿಟಿಷ್ ಸರ್ಕಾರದ ಕ್ರೌರ್ಯ ಹೆಚ್ಚುತ್ತಾ ಹೋಯಿತು. ದಬ್ಬಾಳಿಕೆ, ಒಡೆದು ಆಳುವ ನೀತಿ, ದಮನಕಾರಿ ಕಾನೂನಿನ ಪ್ರಯೋಗಗಳ ಮೂಲಕ ಚಳವಳಿಗಳನ್ನು ಹತ್ತಿಕ್ಕುವ ಸರ್ಕಾರದ ಕ್ರೌರ್ಯ ಮುಂದುವರಿಯುತ್ತಲೇ ಹೋಯಿತು.

ಇಂಥ ಸನ್ನಿವೇಶದಲ್ಲಿ 1920ರ ಸುಮಾರಿಗೆ ಸ್ವಾತಂತ್ರ್ಯ ಚಳವಳಿಗೆ ಹೊಸ ದಿಕ್ಕು ಕೊಟ್ಟು, ಚಳವಳಿಯ ಹಲವು ಧಾರೆಗಳನ್ನು ಒಗ್ಗೂಡಿಸಹೊರಟಿದ್ದ ಗಾಂಧೀಜಿಯ ಎದುರಿಗಾಗಲೀ, ಕಾಂಗ್ರೆಸ್ ನಾಯಕರುಗಳ ಎದುರಿಗಾಗಲೀ ಸಿದ್ಧ ಮಾರ್ಗವೇನೂ ಇರಲಿಲ್ಲ. ಆದರೂ ದೇಶದ ಸ್ವಾತಂತ್ರ್ಯಕ್ಕಾಗಿ ಒಟ್ಟಿಗೇ ಹೋರಾಡಬೇಕೆಂಬ ವಿಶಾಲ ಅರಿವು ವಿವಿಧ ತಾತ್ವಿಕ ಗುಂಪುಗಳಲ್ಲಿ ಮೂಡತೊಡಗಿತು. ಆದ್ದರಿಂದಲೇ ಏಕೀಕೃತ ಸ್ವಾತಂತ್ರ್ಯ ಚಳವಳಿಯೊಂದು ಹೊರ ಹೊಮ್ಮತೊಡಗಿತು. ಸ್ವಾತಂತ್ರ್ಯ ಚಳವಳಿಯ ಈ ಘಟ್ಟದ ಬೆಳವಣಿಗೆಯ ಮಹತ್ವವನ್ನು ಇವತ್ತು ದೇಶದ ಒಳಿತಿಗಾಗಿ ಹೋರಾಡುತ್ತೇವೆ ಎಂದು ಹೇಳಿಕೊಳ್ಳುವ ಎಲ್ಲ ಗುಂಪುಗಳೂ ಮೊದಲು ಅರ್ಥ ಮಾಡಿಕೊಳ್ಳಬೇಕು. ಆ ಕಾಲಕ್ಕೆ ಗಾಂಧೀಜಿಯವರ ನಾಯಕತ್ವವನ್ನೂ, ಅವರ ಹೋರಾಟದ ಮಾರ್ಗವನ್ನೂ ಪೂರ್ಣವಾಗಿ ಒಪ್ಪಲಿ ಬಿಡಲಿ, ಕೊನೆಯ ಪಕ್ಷ ಅಲ್ಲಿದ್ದ ಹಲವು ಗುಂಪುಗಳು ಒಟ್ಟಿಗೇ ಚಳವಳಿಯಲ್ಲಿ ನಡೆಯತೊಡಗಿದ್ದವು.




ನನ್ನ ಸ್ವಾತಂತ್ರ್ಯ



### ಮಹಿಳೆ ಇನ್ನೂ ಬಂದಿಯೇ

ಸಾಮಾಜಿಕವಾಗಿ ಮಹಿಳೆಯರಿಗೆ ಇನ್ನೂ ಸ್ವಾತಂತ್ರ್ಯ ಸಿಕ್ಕಿಲ್ಲ. ಅವಳ ಮೇಲೆ ಇನ್ನೂ ಅಘೋಷಿತ ನಿರ್ಬಂಧವಿದೆ.

ಅವಳು ಹೆಚ್ಚು ಮಾತಾಡಿದರೆ ತಪ್ಪು, ಹೊಸತೇನೊ ಮಾಡ್ತೀನಿ ಅಂದ್ರೆ ತಪ್ಪು, ಕೆಲಸಕ್ಕೆ ಹೋಗ್ತೀನಿ ಅಂದ್ರೆ ತಪ್ಪು, ಪ್ರಶ್ನೆ ಮಾಡಿದ್ರೂ ತಪ್ಪು. ಹೀಗೆ ಏನೇ ಮಾಡಿದ್ರೂ ತಪ್ಪು ತಪ್ಪು ಅನ್ನುವ ಮನಸ್ಥಿತಿಗಳು ಇನ್ನೂ ಕೆಲವೆಡೆ ಜೀವಂತವಾಗಿವೆ. ಇದೊಂಥರ ಅಘೋಷಿತ ನಿರ್ಬಂಧವಿದ್ದಂತೆ. ಈ ಮನಸ್ಥಿತಿಗಳು ಅವಳ ಆಸೆ ಆಕಾಂಕ್ಷೆಗಳನ್ನ ಕಸಿಯುತ್ತಿವೆ. ಇದು ಅವಳ ಸ್ವಾತಂತ್ರ್ಯದ ಹರಣವಲ್ಲದೇ ಬೇರೆನೂ ಅಲ್ಲ.

ಅವಳು ಹೀಗೆ ಇರಬೇಕೆನ್ನುವ ಮನಸ್ಥಿತಿಗಳಿಂದ ಮುಕ್ತಿ ಸಿಕ್ಕಾಗ ನಿಜಕ್ಕೂ ಅವಳು ಸ್ವತಂತ್ರಳು. ದೇಶದ ಪ್ರತಿ ಮಹಿಳೆಗೂ ಇಂಥ ಸ್ವಾತಂತ್ರ್ಯ ಸಿಗಬೇಕು. ಅವಳಿಗೆ ಎಲ್ಲೆಡೆ ಸಾಮಾಜಿಕ ನ್ಯಾಯ ಸಿಗುವುದೇ ನನ್ನ ಪ್ರಕಾರ ನಿಜವಾದ ಸ್ವಾತಂತ್ರ್ಯ.

**-ಇಶಾ ಪಂತ್,** ಕಲಬುರಗಿ ಎಸ್ಪಿ